ದಿಃ 17-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀ.ಪಿ ಆರ ಕೆ ವಕೀಲರಿಂದಃ**

ನನ್ನ ತಂದೆಗೆ ವಯಸ್ಸ ಆಗಿದೆ ಎಂದರೆ ಸರಿ. ಆತ 2 ನೇ ಎದುರುದಾರನ ಮನೆಯಲ್ಲಿ ಇದ್ದಾನೆ. ಆತನ ಉಟೋಪಚಾರ ಹಾಗೂ ಔಷದೋಷಚಾರವನ್ನು 2ನೇ ಪ್ರತಿವಾದಿ ಮಾಡುತ್ತಿದ್ದಾನೆಂದರೆ ಸರಿ. ಆತನ ಆಸ್ಪತ್ರೆಗೆ ತಿಂಗಳಿಗೆ 40 ರಿಂದ 50 ಸಾವಿರ ಖರ್ಚು ಬರುತ್ತದೆ ಎಂದರೆ ಸರಿಯಲ್ಲ. ಆತ ತನ್ನ ಬಳಿ ಹಣ ಇಲ್ಲದಿದ್ದರುೂ ಸಾಲ ಮಾಡಿ ಔಷದೋಪಚಾರ ಕೊಡಿಸುತ್ತಿದ್ದಾರೆಂದರೆ ಸರಿ.

ನನ್ನ ತಾಯಿ ಪ್ರತ್ಯೇಕವಾಗಿ ವಾಸವಾಗಿದ್ದಾರೆಂದರೆ ಸರಿ. ನನ್ನ ತಂದೆಯ ಮೇಲೆ ದೂರು ನೀಡಿದ್ದು ಅದು ಸಿ.ಸಿ ನಂಬರ 2060/2023 ಆಗಿದೆ ಎಂದರೆ ಸರಿ. ಅದು 2 ಅಧಿಕ ಜೆ.ಎಂ ಎಫ್.ಸಿ ನ್ಯಾಯಾಲಯದಲ್ಲಿ ಬಾಕಿ ಇದೆ ಎಂದರೆ ಸರಿ. ಅದರಲ್ಲಿ ನಾನೇ ದೂರು ನೀಡಿದ್ದೇನೆಂದರೆ ಸರಿ. ಅದು ಇನ್ನೂ ಚಾಲ್ತಿ ಇದೆ ಎಂದರೆ ಸರಿ. ಆದ್ದರಿಂದ ನಮ್ಮಗಳಲ್ಲಿ ವೈಮನಸ್ಸು ಇದೆ ಎಂದರೆ ಸರಿ. ನನ್ನ ತಂದೆಗೆ ಆತ ಸಹಾಯ ಮಾಡಿದ ಹಣವನ್ನು ವಾಪಸ ನೀಡಿದ್ದೇನೆಂದು ತೋರಿಸಲು ದಾಖಲೆ ನನ್ನ ಬಳಿ ಇಲ್ಲ. ಬಾಯಿ ಮುಖಾಂತರ ಮಾತನಾಡಿ ಹಣ ನೀಡಿರುತ್ತೇನೆ. ನಾನು ಜೈಲ ನಲ್ಲಿ ಇದ್ದಾಗ ಜೈಲರ ಮುಖಾಂತರ ಜಿ ಪಿ ಎ ಬರೆದು ಕೊಟ್ಟಿದ್ದೆ ಎಂದರೆ ಸರಿ . ಅದನ್ನು ಬಡೆದು ತೆಗೆದುಕೊಂಡಿದ್ದಾರೆಂದರೆ ಎಂದು ಹೇಳುತ್ತಾರೆ. ಸದರಿ ಜಿ ಪಿ ಎ ನನ್ನು ನನ್ನ ಅಣ್ಣನ

ಹೆಂಡತಿಗೆ ನೀಡಿದ್ದೆ ಎಂದರೆ ಸರಿ. ಓ ಎಸ ನಂಬರ 189/2012 ಪ್ರಕಾರ ದಾವೆ ಮಾಡಿದ್ದೆ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ಸಹೋದರ , ಸಹೋದರನ ಹೆಂಡತಿ ಮತ್ತು ನನ್ನ ಮಕ್ಕಳನ್ನು ಎದುರು ಪಕ್ಷಗಾರರನ್ನಾಗಿ ಮಾಡಿದ್ದೆ ಎಂದರೆ ಸರಿ. ಸದರಿ ದಾವೆ ದಿನಾಂಕ 05/04/2022 ನನ್ನಂತೆ ತೀರ್ಪು ಆಯಿತು ಎಂದರೆ ಸರಿ. ಸದರಿ ದಾವೆ ವಾದ ಪತ್ರ ಮತ್ತು ಡಿಕ್ರಿ ಪ್ರತಿಯನ್ನು ಅಭಿಮುಖವಾಗಿ ನಿಡಿ-1 ಮತ್ತು 2 ಎಂದು ಗುರುತಿಸಲಾಯಿತು. ನನ್ನ ತಂದೆ ಮತ್ತು ಸಹೋದರ ನನ್ನ ಕ್ರಿಮಿನಲ್ ಪ್ರಕರಣದ ಮೇಲೆ ಖರ್ಚು ಮಾಡಿದ್ದನ್ನು ವಾಪಸ ಕೇಳಿದ ನಂತರ ನಾನು ಈ ಕೊಟ್ಟಿ ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ.

ಮನೇ ಆಸ್ತಿಗಳ ನಂಬರ ಹೇಳಲು ಬರುವುದಿಲ್ಲ. ನಾನು ಪಿ.ಡಿ.ಓ. ಬಳಿ ಹೋಗಿಲ್ಲ . ಉತಾರೆ ಕೇಳಿಲ್ಲ ಎಂದರೆ ಸಾಕ್ಷಿಯೂ ಸುಮ್ಮನೆ ಇರತ್ತಾರೆ. ಸದರಿ ಎಲ್ಲಾ ಪಹಣಿಗಳಲ್ಲಿ ನನ್ನ ತಂದೆ ಆತನ ಸಹೋದರ ಮತ್ತು ಅವರ ಮಕ್ಕಳ ಹೆಸರು ಇದೆ ಎಂದರೆ ಸರಿ. ಸುಳ್ಳು ಮಾಹಿತಿ ಕೊಟ್ಟು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ.ಹೇ. ಕೇ. ಸ. ಇದೆ.

ಪ್ರ.ಹಿ.ದಿ.ನ್ಯಾಯಾಧೀಶರು, ಚಿಕ್ಕೋಡಿ